ರಾಮನಗರಕ್ಕೆ ಓಡಿಸುವ ಕುರಿತು ಎಕ್ಸ್‌ಪ್ರೆಸ್, ಕ್ರಮ ಕೈಗೊಳ್ಳುವೇ ಬೇಗೆ ಎಂಬುದರ ಕುರಿತು ನಾನು ತಮ್ಮ ಮುಖಾಂತರ ಅವರ ಗಮನ ಸೆಳೆಯುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು).— ಮಾನ್ಯ ಅಧ್ಯಕ್ಷರೆ, ಸದಸ್ಯರ ಪ್ರಶ್ನೆಗೆ ನಾನು ಈ ಹೇಳಿಕೆಯನ್ನು ಕೊಡಬಯಸುತ್ತೇನೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಬೆಂಗಳೂರು-ರಾಮನಗರ ಮಾರ್ಗದಲ್ಲಿ ಪ್ರತಿ ಆರು ನಿಮಿಷಗಳಿಗೊಂದರಂತೆ ಬೆಳಿಗ್ಗೆ ೬ ಘಂಟೆಯಿಂದ ರಾತ್ರಿ ೯-೩೦ ಘಂಟೆಯವರೆಗೂ ಒಟ್ಟು ೧೫೫ ಸಾರಿಗೆಗಳ ಸೌಕರ್ಯವನ್ನು ಕಲ್ಪಿಸಿದೆ. ಉತ್ತರ ಕರ್ನಾಟಕ ಭಾಗದ ರೇಷ್ಮೆ ಬೆಳಗಾರರು ತಾವು ಉತ್ಪಾದಿಸುವ ರೇಷ್ಮೆ ಗೂಡುಗಳನ್ನು ರಾಮನಗರ ಮಾರುಕಟ್ಟೆಗೆ ತೆಗೆದುಕೊಂಡು ಹೋಗಲು ಅನುವು ಮಾಡಿಕೊಡುವ ಸಲುವಾಗಿ ತೆರದಾಳ-ಬೆಂಗಳೂರು ಸಾರಿಗೆಯನ್ನೊಳಗೆಪಡಂತೆ ಅನೇಕ ರಾತ್ರಿ ಸಾರಿಗೆಗಳು ರೇಷ್ಮೆ ಗೂಡುಗಳನ್ನು ಹೊತ್ತು ತಂದಾಗ ಅವುಗಳು ಬೆಂಗಳೂರು ಬಸ್ ನಿಲ್ದಾಣದ ರಾಮನಗರದ ಬಸ್ಸುಗಳು ಹೊರಡುವ ಕಟ್ಟೆಯವರೆಗೂ ಬಂದು ರೈತರು ತಮ್ಮ ರೇಷ್ಮೆಗೂಡನ್ನು ರಾಮನಗರದ ಬಸ್ಸುಗಳಿಗೆ ತೊಂದರೆಯಿಲ್ಲದೇ ಸ್ಥಳಾಂತರಿಸಲು ಅನುಕೂಲ ಮಾಡಿ ಕೊಡಲಾಗಿದೆ. ಪ್ರತಿ ರಾತ್ರಿ ಸಾರಿಗೆಯಲ್ಲಿ ಮೂರು ಅಥವಾ ನಾಲ್ವರು ರೈತರು ರೇಷ್ಮೆ ಉತ್ಪಾದನೆಯನ್ನು ತರುವುದರಿಂದ ಮತ್ತು ಬೆಂಗಳೂರು-ರಾಮನಗರ ಮಾರ್ಗದಲ್ಲಿ ಅಗತ್ಯವಾದ ಸಾರಿಗೆ ಸೌಕರ್ಯವನ್ನು ನಿಗಮವು ನೀಡುತ್ತಿರುವುದರಿಂದ ತೆರದಾಳ್-ಬೆಂಗಳೂರು ರಾತ್ರಿ ಸಾರಿಗೆಯನ್ನು ರಾಮನಗರಕ್ಕೆ ವಿಸ್ತರಿಸುವ ಅಗತ್ಯ ಕಂಡುಬರುವುದಿಲ್ಲ.

ಶ್ರೀ ಕೆ. ಬಿ. ಮಲ್ಲಪ್ಪ ಸದಸ್ಯರು ಗೈರು ಹಾಜರು.

೭) ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ದುರ್ವ್ಯವಹಾರಗಳು ನಡೆದಿದ್ದು ಅಡಳಿತವನ್ನು ಸ್ವಚ್ಛಗೊಳಿಸಲು ಕ್ರಮಕ್ಕೆ ಒತ್ತಾಯ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೆ, ಮಂಗಳೂರು ವಿಶ್ವವಿದ್ಯಾನಿಲಯ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆಯೆಂಬ ಅಭಿಪ್ರಾಯ ಇತ್ತು. ಆದರೆ ಈ ವಿಶ್ವವಿದ್ಯಾನಿಲಯ ಇತ್ತೀಚೆಗೆ ಹಗರಣಗಳ ಆಗರವಾಗಿದೆ. ಉದಾಹರಣೆಗೆ ಇತರ ಸೂಕ್ತ ಅರ್ಹ ಅಭ್ಯರ್ಥಿಗಳಿದ್ದರೂ ಉಪಕುಲಪತಿಯವರ ಮಗನಿಗೆ ಅಧ್ಯಾಪಕ ಹುದ್ದೆಯನ್ನು ನೀಡಿ ಸ್ವಜನ ಪಕ್ಷಪಾತ ಎಸಗಲಾಗಿದೆ. ಅಲ್ಲದೆ ೧೯೮೭-೮೮ನೇ ಶೈಕ್ಷಣಿಕ ವರ್ಷ ನಡೆದ ಅಂತಿಮ ಬಿ.ಕಾಂ. ಪರೀಕ್ಷೆಯ ಇನ್‌ಕಮ್ ಟ್ಯಾಕ್ಸ್ ಮತ್ತು ಕಾಸ್ಟ್ ಅಕೌಂಟಿಂಗ್ ಪ್ರಶ್ನೆ ಪತ್ರಿಕೆಗಳು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಖಾಸಗಿ ಕಾಲೇಜು ಒಂದರಲ್ಲಿ ಪರೀಕ್ಷೆಗೆ ಮೊದಲೇ ಬಹಿರಂಗಗೊಂಡಿದ್ದವು. ದ್ವಿತೀಯ ಬಿ.ಕಾಂ. ಪ್ರಶ್ನೆ ಪತ್ರಿಕೆಗಳೂ ಬಹಿರಂಗವಾಗಿದ್ದವು. ಪರೀಕ್ಷಾ ಮಂಡಳಿಯ ಅಧ್ಯಕ್ಷರೇ ಇದಕ್ಕೆ ಕಾರಣಕರ್ತರು. ಖಾಸಗಿ ಕಾಲೇಜುಗಳಿಗೆ ಅನುಮತಿ ನೀಡುವಲ್ಲಿ ವಿಶ್ವವಿದ್ಯಾನಿಲಯ ಸ್ಥಾಪಿತ ಹಿತಾಸಕ್ತಿ ಗುಂಪುಗಳಿಗೆ ಪ್ರೋತ್ಸಾಹ ನೀಡುತ್ತಿದೆ. ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ಕೊಡಗು ಜಿಲ್ಲೆಯ ಕಾಲೇಜುಗಳಿಗೆ ಇಂಜಿನಿಯರಿಂಗ್ ಕಾಲೇಜು ಸ್ಥಾಪನೆಯಲ್ಲಿ ನಿರ್ದಿಷ್ಟ ಕೋಮೊಂದರ ಅಡಳಿತ ವರ್ಗಕ್ಕೆ ಅಫಿಲಿಯೇಷನ್ ಸಮಿತಿ ಪಕ್ಷಪಾತಧೋರಣೆ ತಳೆದಿದೆ.

ಈ ರೀತಿ ಹಲವಾರು ಅಕ್ರಮ ದುರ್ವ್ಯವಹಾರಗಳು ನಡೆದಿದ್ದು ಈ ಬಗ್ಗೆ ಸರ್ಕಾರ ತನಿಖಾ ಸಮಿತಿ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವರೇ ? ಕಲುಷಿತಗೊಂಡಿರುವ ಮಂಗಳೂರು ವಿಶ್ವವಿದ್ಯಾನಿಲಯವನ್ನು ಸ್ವಚ್ಛಗೊಳಿಸಬೇಕು ವಿದ್ಯಾರ್ಥಿಗಳು ಸಾರ್ವಜನಿಕರು ವಿಶ್ವವಿದ್ಯಾನಿಲಯದ ಮೇಲೆ ವಿಶ್ವಾಸ ಕಳೆದುಕೊಳ್ಳದಂತೆ ಆಗಲು ಶೀಘ್ರ ಕಠಿಣ ಕ್ರಮ ಆಗತ್ಯ.

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ ರಾಜ್ಯಮಂತ್ರಿ).—ಮಾನ್ಯ ಅಧ್ಯಕ್ಷರೆ, ಮಂಗಳೂರು ವಿಶ್ವವಿದ್ಯಾನಿಲಯದ ಎಲ್ಲಾ ಹುದ್ದೆಗಳನ್ನೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆ ೧೯೭೬ರ ಪ್ರಕರಣ ೪೯ಕ್ಕೆ ಅನುಗುಣವಾಗಿ ಭರ್ತಿ ಮಾಡಲಾಗುತ್ತಿತ್ತು. ಆದೇ ಪ್ರಕಾರ ಒಂದು ಉಪಾಧ್ಯಾಯರ ಹುದ್ದೆಗೆ ಅದರ ಅಭ್ಯರ್ಥಿ ಆಗಿರುವ ಉಪಕುಲಪತಿಯವರ ಮಗನೂ

ಕೂಡ ಆಯ್ಕೆ ಆಗಿರುತ್ತಾರೆ. ಇತ್ತೀಚೆಗೆ ನಡೆದ ಸಿಂಡಿಕೇಟ್ ವಿಶೇಷ ಸಭೆಯಲ್ಲಿ ತೃತೀಯ ಬಿ.ಕಾಂ. ಪರೀಕ್ಷೆಯ ಫಲಿತಾಂಶವನ್ನು ತಡೆಹಿಡಿದು ೨ ಪ್ರಶ್ನೆ ಪತ್ರಿಕೆಗಳು ಕಾಲೇಜೊಂದರಲ್ಲಿ ಬಹಿರಂಗವಾಗಿದೆ ಎಂಬ ಅಪಾದನೆಯ ಮೇಲೆ ಸೂಕ್ತ ವಿಚಾರಣೆ ನಡೆಸಿ ತೀರ್ಮಾನ ಕೈಗೊಳ್ಳಬೇಕೆಂದು ನಿರ್ಧರಿಸಿದೆ. ೧೯೬೦ ಮತ್ತು ೨೯೬೦ ವರ್ಷ ಬಿ.ಕಾಂ. ಪರೀಕ್ಷಾ ಫಲಿತಾಂಶವನ್ನು ೧೦-೬-೧೯೬೦ರಂದು ಪ್ರಕಟಿಸಲಾಗುತ್ತದೆ.

ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಕೋಶಾಲ ನಗರದಲ್ಲಿ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸಲು ಕ್ಯಾಥೊಲಿಕ್ ಕಾಲೇಜ್ ಆಫ್ ಇಂಜಿನಿಯರಿಂಗ್ ಎಂಬ ಸಂಸ್ಥೆ ಮುಂದೆ ಬಂದಿದ್ದು, ಇದರ ಬಗ್ಗೆ ಸ್ಥಳೀಯ ತನಿಖಾ ಸಮಿತಿಯು ವರದಿಯನ್ನು ಸಲ್ಲಿಸಿ ಕಾಲೇಜಿಗೆ ಸಂಯೋಜನೆಯನ್ನು ಶಿಫಾರಸ್ಸು ಮಾಡಿರುವುದಿಲ್ಲ. ಆದರೆ ಆ ವರದಿಯನ್ನು ಶೈಕ್ಷಣಿಕ ಮಂಡಳಿ ಪರಿಶೀಲಿಸಿ ಕೊಡಗು ಜಿಲ್ಲೆಯಲ್ಲಿ ಯಾವುದೇ ಇಂಜಿನಿಯರಿಂಗ್ ಕಾಲೇಜು ಇದುವರೆಗೆ ಸ್ಥಾಪನೆಯಾಗದ ಕಾರಣ ಸದರಿ ಇಂಜಿನಿಯರಿಂಗ್ ಕಾಲೇಜು ಬೇಕಾದ ಸಲಕರಣೆ ಮತ್ತು ಸವಲತ್ತುಗಳನ್ನು ಹೊಂದುವುದಾದರೆ ಮಾತ್ರ ಸಂಯೋಜನೆಯನ್ನು ಶಿಫಾರಸ್ಸು ಮಾಡಬಹುದು ಎಂದು ಸೂಚಿಸಿದೆ, ಶೈಕ್ಷಣಿಕ ಮಂಡಳಿಯ ನಿರ್ಧಾರವನ್ನು ಸಿಂಡಿಕೇಟ್ ಅನುಮೋದಿಸಿದ್ದುದರಿಂದ ಇವುಗಳೆಲ್ಲವುಗಳ ನಡೆವಳಿಕೆಗಳೊಂದಿಗೆ ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿದ್ದು ಅದನ್ನು ಪರಿಶೀಲಿಸಲಾಗುತ್ತಿದೆ.

ಶ್ರೀ ಎಚ್. ಬಿ. ಯಂಕಾ ನಾಯಕ್.—ಹಾಜರಿರಲಿಲ್ಲ.

ಶ್ರೀ ಆರ್. ಎನ್. ನಾಯಕ್. —ಅಧ್ಯಕ್ಷರೆ, ೬ನೇ ತಾರೀಖಿನ ದಿವಸ ಎರಡು ನೋಟೀಸ್‌ಗಳನ್ನು ಷಿಷಿಳರಲ್ಲಿ ಕಳುಹಿಸಿಕೊಟ್ಟಿದ್ದೆ.

ಅಧ್ಯಕ್ಷರು.—ನೀವು ಓದಿ ಭಾಷಣ ಜೇಡ. ಪ್ರತಿ ದಿವಸ ನಿಮಗೆ ಕಲಿಸಬೇಕೇ ?

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಷಿಷಿಳರಲ್ಲಿ ಕೇಳಿದ ಪ್ರಶ್ನೆಗೆ ಉತ್ತರ ಹೇಳಿ ಎಂದು ಹೇಳಿ.

ಶ್ರೀ ಆರ್. ಎನ್. ನಾಯಕ್.—ನಾನು ೬ನೇ ತಾರೀಖು ಷಿಷಿಳನೇ ಕಲಮಿನ ಕೆಳಗೆ ನಾನು ಇಲ್ಲಿ ಎರಡು ಸೂಚನೆಗಳನ್ನು ಓದಿದ್ದೇನೆ. ಅದಕ್ಕೆ ಇನ್ನೂ ಉತ್ತರ ಕೊಟ್ಟಿಲ್ಲ. ಅದನ್ನು ಕೊಡಲಿ. ಅದಾದ ಮೇಲೆ ಇನ್ನೊಂದು ಇದೆ.

ಅಧ್ಯಕ್ಷರು. —ನಿಮ್ಮ ನೋಟೀಸನ್ನು ನಾನೇ ಓದಲೇ ?

೮) ಹೊನ್ನಾವರ ತಾಲ್ಲೂಕಿನ ನಗರ ಬಸ್ತಿಕೇರಿ ಮಂಡಲ ಪಂಚಾಯತ್ ಕ್ಷೇತ್ರದ ಬೇಗೋಡಿ ಗ್ರಾಮದಲ್ಲಿ ಕಾಡಾನೆಗಳ ಹಾವಳಿಯಿಂದ ನೊಂದವರಿಗೆ ಪರಿಹಾರಕ್ಕೆ ಒತ್ತಾಯ.

ಶ್ರೀ ಆರ್. ಎನ್. ನಾಯಕ್.—ಹೊನ್ನಾವರ ತಾಲ್ಲೂಕಿನ ನಗರ ಬಸ್ತಿಕೇರಿ ಮಂಡಲ ಪಂಚಾಯತ್ ಕ್ಷೇತ್ರದಲ್ಲಿರುವ ಬೇಗೋಡಿ ಗ್ರಾಮವು ಸಹ್ಯಾದ್ರಿಯ ಮಡಿಲಲ್ಲಿರುವ ಚಿಕ್ಕಹಳ್ಳಿ. ಅಲ್ಲಿ ಕಾಡಾನೆಯು ಕಾಟ ವಿಪರೀತವಾಗಿ ನೆಟ್ಟ ತೆಂಗು, ಅಡಿಕೆ ಬಾಳೆ ಗಿಡಗಳನ್ನು ಆನೆ ತಿಂದೂ ತುಳಿದು ನಾಶಪಡಿಸಿರುತ್ತದೆ. ಈ ಬಗ್ಗೆ ಅಲ್ಲಿ ನಿವಾಸಿ ಪರಮೇಶ್ವರ ಹೆಗಡೆಯವರು ಮಾನ್ಯ ಮುಖ್ಯಮಂತ್ರಿಗಳಿಗೆ ೨ ಅರ್ಜಿ, ಅರಣ್ಯ ಮಂತ್ರಿಗಳಿಗೆ ೧ ಅರ್ಜಿ ಕೆನರಾ ಸರ್ಕಲ್ ಕನ್ಸರ್‌ವೇಟರ್ ಅವರಿಗೆ ೪ ಅರ್ಜಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಹೊನ್ನಾವರ ಇವರಿಗೆ ಮೂರು ಅರ್ಜಿ ಗೇರಸಪ್ಪಾ ಆರ್.ಎಫ್.ಒ. ಅವರಿಗೆ ೯ ಅರ್ಜಿ ಹಾಗೂ ಕಾರವಾರದ ಜಿಲ್ಲಾ ಪರಿಷತ್ ಹಾಗೂ ಜಿಲ್ಲಾಧಿಕಾರಿಗಳಿಗೆ ಅರ್ಜಿಗಳನ್ನು ಬರೆದು ಸೋತು ಸುಣ್ಣವಾಗಿದ್ದಾರೆ. ಯಾರಿಂದಲೂ ಈ ತನಕ ಪರಿಹಾರ ಇಲ್ಲವೆಂದು ತಿಳಿಸುತ್ತಾರೆ. ಹಲವಾರು ರೈತರ ಬೆಳೆ ನಾಶವಾಗಿದೆಯಲ್ಲದೆ ಪರಮೇಶ್ವರ ಹೆಗಡೆಯವರ ಅಜ ಮಾಸ ೫೦,೦೦೦-೦೦ ರೂಪಾಯಿಗಳ ಬೆಳೆ ನಾಶವಾಗಿದೆ,

ಈಗಲಾದರೂ ಸ್ಥಳಕ್ಕೆ ಭೇಟಿ ನೀಡಿ ನೊಂದವರಿಗೆ ಪರಿಹಾರ ಒದಗಿಸುವ ಬಗ್ಗೆ ಆದೇಶಿಸಲು ಅರಣ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.